# ನೀರು ಮತ್ತು ಗಿಡ ಚೆಲ್ಲುವ ಆಚರಣೆಗಳು

***Dr.Gundanna.C.Kalaburgi**

ನಂಬಿಕೆ–ಆಚರಣೆಗಳು ನಮ್ಮ ಜನಪದರ ಬದುಕಿನ ಜೀವಾಳವಾಗಿದೆ. ಜನಪದರು ಆಚರಿಸುವ ಆಚರಣೆಗಳು ಅವರ ದೈನಂದಿನ ಜೀವನದೊಂದಿಗೆ ಹಾಸು ಹೊಕ್ಕಾಗಿದ್ದು ಅವು ಜನಪದರ ಜೀವನಮೌಲ್ಯಗಳಾಗಿ ಕಂಡುಬಂದಿವೆ ಎಂದರೆ ತಪ್ಪಾಗಲಾರದು. ಜನಪದರ ಜೀವನ ಕ್ರಮ ನಿಂತಿರುವುದೇ ಈ ನಂಬಿಕೆ–ಆಚರಣೆಗಳೆಂಬ ಅಡಿಪಾಯದ ಮೇಲೆ. ಭಾರತದ ಜಾನಪದವನ್ನು ಪಾಶ್ಚಿಮಾತ್ಯ ಜನಪದದೊಂದಿಗೆ ಹೋಲಿಸುವ ಸಂದರ್ಭದಲ್ಲಿ ವಿದ್ವಾಂಸರು ನಮ್ಮ ಜನರು **ಜನಪದವನ್ನು ಬದುಕುವವರು** ಎಂದು ಹೇಳಿರುವುದು ಇದೇ ಅರ್ಥದಲ್ಲಿ ಎಂದು ತೋರುತ್ತದೆ. ಹುಟ್ಟಿನಿಂದ ಸಾವಿನ ವರೆಗಿನ ಎಲ್ಲಾ ಜೀವನವರ್ತನ ಹಾಗೂ ವಾರ್ಷಿಕವರ್ತನ ಘಟ್ಟಗಳಲ್ಲೂ ಪಶುಪಾಲಕರಿಗೆ ಮತ್ತು ದನ–ಕುರಿ–ಮೇಕೆಗಳಿಗೆ ರೋಗರುಜಿನಗಳು ಬಂದಾಗ ಜನಪದರು ತಮ್ಮದೇ ಆದ ಪಾರಂಪರಿಕ ಜ್ಞಾನಗಳ ಮೂಲಕ ಪಶುಪಾಲಕರು ತಮ್ಮ ಜನ ಜಾನುವಾರುಗಳನ್ನು ಹಲವಾರು ಆಚರಣೆಗಳ ಮೂಲಕ ಸಂರಕ್ಷಿಸಿಕೊಳ್ಳುತ್ತಾರೆ.ಅಂತಹ ಹಲವಾರು ಆಚರಣೆಗಳಲ್ಲಿ ನೀರು ಮತ್ತು ಗಿಡಚೆಲ್ಲುವ ಆಚರಣೆಗಳು ಬಹು ಮುಖ್ಯವಾದದ್ದು.

ಆದಿಮಾ ಸಂಸ್ಕೃತಿಗಳಲ್ಲಿ ಪಶುಪಾಲಕರು ತಮಗೆ ಹಾಗೂ ತಮ್ಮ ಜಾನುವಾರುಗಳಿಗೆ ರೋಗ–ರುಜಿನಗಳು ಬಂದಾಗ ತಮ್ಮ ಸುತ್ತಮುತ್ತಲಿರುವ ಗಿಡಮೂಲಿಕೆಗಳಿಂದ ತಯಾರಿಸಿದ ಔಷಧಿಯನ್ನು ಮಾತ್ರ ಕೊಡದೆ, ದೇವರು ಮತ್ತು ದೆವ್ವಗಳ ಬಗೆಗಿನ ನಂಬಿಕೆ ಮತ್ತು ಆಚರಣೆಗಳನ್ನು ಮಾಡುವುದರ ಮೂಲಕ ವಾಸಿಮಾಡುವ ಪರಿಪಾಠ ಬೆಳಸಿ ಕೊಂಡಿದ್ದರು. ಇಂಥವುಗಳಲ್ಲಿ 'ನೀರು ಹಾಕುವುದು' ಒಂದು. ಇದನ್ನು 'ಮಣಿ ನೀರು' ಹಾಕುವುದು, 'ರಾವು ತೆಗೆವುದು', 'ಜಾಡು ಚೆಲ್ಲುವುದು' ಎಂದೆಲ್ಲ ಕರೆಯುವುದು ವಾಡಿಕೆ. ಈ ಸಂಪ್ರದಾಯಗಳಲ್ಲಿ ಕೆಲವನ್ನು ಮುಂದಿನಂತೆ ತಿಳಿಯಬಹುದಾಗಿದೆ.

**ಅ. ಮನುಷ್ಯರಿಗೆ ನೀರು ಹಾಕುವುದು :** ಮನುಷ್ಯರಿಗೆ ಬರುವ ಕಾಯಿಲೆಗಳಲ್ಲಿ ಕೆಲವು ದೇಹದ ಆಂತರಿಕ ತೊಂದರೆಗಳಿಂದ ಬಂದವುಗಳಾಗಿರದೆ ಹೊರಗಿನ ಕೆಡಕುಗಳಿಂದಲೂ ಬಂದಿರುತ್ತವೆ ಎಂಬುದಾಗಿ ಪಶುಪಾಲಕರು ನಂಬುತ್ತಾರೆ. ಈ ಕೆಡಕುಗಳು ಪ್ರಕೃತಿಯಲ್ಲಿ ಅಸ್ತಿತ್ವ ಪಡೆದ ದುಷ್ಟ ಶಕ್ತಿಗಳು ದೇಹವನ್ನು ಪ್ರವೇಶಿಸಿರುವುದರಿಂದ ಅಥವಾ ಸಮಾಜದ ಶತೃಗಳು ದ್ವೇಷಪೂರಿತವಾಗಿ ಮಾಡಿಸಿದ ಮಾಟ ಮಂತ್ರದಿಂದ ಬರುತ್ತವೆ ಎಂಬುದು ಆದಿಮಾ ಜನಾಂಗಗಳ ನಂಬಿಕೆ. ಹಾಗಾಗಿ ಇಂಥ ಕೆಡುಕುಗಳನ್ನು ಹೋಗಲಾಡಿಸಲು 'ನೀರು ಹಾಕುವ' ಆಚರಣೆಯು ರೂಢಿಗೆ ಬಂದಿರಬೇಕು. ಇದನ್ನು ನಡೆಸಿಕೊಡುವವರು ಗ್ರಾಮೀಣ ಮಂತ್ರವಾದಿಗಳು ಅಥವಾ ದೇವರ ಪೂಜಾರಿಗಳು. ಅಮವಾಸ್ಯೆಯ ದಿನ ಸಂಜೆ ಅಥವಾ ರಾತ್ರಿಯ ಹೊತ್ತಲ್ಲಿ ಈ ಅಚರಣೆ ನಡೆಸುತ್ತಾರೆ. ಅದಕ್ಕೂ ಮೊದಲು ದಿನ ಮತ್ತು ಸಮಯ ನಿಗದಿ ಮಾಡಿ, ಕಾರ್ಯಕ್ಕೆ ಬೇಕಾಗುವ ಎಲ್ಲಾ ಬಗೆಯ ಸಾಮಗ್ರಿಗಳನ್ನು ಹೊಂದಿಸಿಕೊಳ್ಳುವಂತೆ ರೋಗಿಯ ಕಡೆಯವರಿಗೆ ಸೂಚಿಸಲಾಗಿರುತ್ತದೆ. ಸಾಮಾನ್ಯವಾಗಿ ಇದಕ್ಕೆ ಬೇಕಾಗುವ ವಸ್ತುಗಳೆಂದರೆ ಮೂರು ಅಥವಾ ಐದು ಭಾವಿಯ/ಹಳ್ಳದ ನೀರು, ದೊಡ್ಡಕಾಯಿ/ದಾಟುಕಾಯಿ(ತೆಂಗಿನ ಕಾಯಿ ಅಲ್ಲ), ನಿಂಬೆಹಣ್ಣು, ಐದು ಬಗೆಯ ಹಿಟ್ಟು, ಹರಿಶಿಣ–ಕುಂಕುಮ, ಕೆಲವೊಮ್ಮೆ ಒಂದು ಬೇಟೆ(ಹಲವು ಬಾರಿ ಚಿಕ್ಕ ಪಕ್ಷಿಗಳು ಆದರೂ ಸರಿ) ಇತ್ಯಾದಿ. ಇಂಥ ಹಲವಾರು ಸಾಮಗ್ರಿಗಳನ್ನು ಮಾಂತ್ರಿಕರ/ಪೂಜಾರಿಯ ನಿರ್ದೇಶನದಂತೆ ರೋಗಿಯ ಕಡೆಯವರು ಜೋಡಿಸಿಟ್ಟುಕೊಂಡಿರುತ್ತಾರೆ. ಈ ಸಾಮಗ್ರಿಗಳೊಂದಿಗೆ ಅರಣ್ಯಕ್ಕೆ ಇಲ್ಲವೆ ಸ್ಮಶಾನಕ್ಕೆ ತೆರಳಿ, ಒಂದು ನಿರ್ದಿಷ್ಟ ಸ್ಥಳದಲ್ಲಿ ರಂಗ(ರಂಗೋಲಿ ಮಾದರಿಯಲ್ಲಿ)ವನ್ನು ನಿರ್ಮಿಸಿ, ಅದರ ಒಳಗೆ ರೋಗಿಯನ್ನು ಕೂರಿಸಿ ಉಗ್ರವಾದ ಪೂಜೆ ಸಲ್ಲಿಸಿ, ನೀರನ್ನು ಹಾಕಲಾಗುತ್ತದೆ. ಇದರಿಂದ ಬಂದಿರುವ ರೋಗಗಳು ವಾಸಿಯಾಗುವುದು ಖಾತ್ರಿ ಎಂಬುದು ಕೂತೂಹಲ ಸಂಗತಿ.

**ಆ. ದನ–ಕುರಿಗಳಿಗೆ ನೀರು ಹಾಕುವುದು:** ಕೃಷಿ ಪ್ರಧಾನವಾದ ನಮ್ಮ ದೇಶದಲ್ಲಿ ಪಶುಪಾಲಕ ಸಂಸ್ಕೃತಿ ಅತೀ ಹೆಚ್ಚು ಮಹತ್ವವನ್ನು ಪಡೆದುಕೊಂಡಿದೆ. ಪಶುಪಾಲಕರು ತಮ್ಮ ನೆರೆಹೊರೆಯ ಕುರಿ, ದನ ಮತ್ತು ಎಮ್ಮೆಗಳಿಗೆ 'ಕಾಲು ಬಾಯಿ ಜ್ವರ' ಬಂದಿದೆ ಎಂದು ತಿಳಿದ ತಕ್ಷಣ ತಮ್ಮದೇ ಆದ ಕೆಲವು ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸುತ್ತಾರೆ. ಅವುಗಳಲ್ಲಿ ಒಂದೆರಡನ್ನು ಹೆಸರಿಸುವುದಾದರೆ; ಜಿಲ್ಲೆಯ ಕೆಲವು ಭಾಗಗಳಲ್ಲಿ ಕಾಲು ಬಾಯಿ ಜ್ವರ ತಡೆಗಟ್ಟಲು ಈ ಕ್ರಮವನ್ನು ಅನುಸರಿಸುತ್ತಾರೆ. 'ಶನಿವಾರ ರಾತ್ರಿ ಮೂರು ಜನ, ಮೂರು ಗಿಡಗಳ(ಯಾವ ಗಿಡವೆಂದು ಮುಕ್ತವಾಗಿ ವಕ್ತೃ ಹೇಳುವುದಿಲ್ಲ. ಹೇಳಿದರೆ ವೈದ್ಯದಲ್ಲಿರುವ ಶಕ್ತಿ ಹೋಗುತ್ತದೆ ಎಂಬ ನಂಬಿಕೆ ಅವರಲ್ಲಿದೆ. ವೈದ್ಯ ವೃತ್ತಿಯ ಗುಟ್ಟನ್ನು ಬಿಟ್ಟುಕೊಟ್ಟರೆ ಅವರ ಪ್ರಾಮುಖ್ಯತೆ ಇರುವುದಿಲ್ಲ ಎಂಬ ಹೆದರಿಕೆಯೂ ಇದರ ಹಿಂದಿರುವ ಸತ್ಯ) ಹತ್ತಿರ ಪೂಜೆ ಮಾಡಿ, ಅಂಗದಾರ ಕಟ್ಟಿ, ಅಲ್ಲೇ ಮಲಗಿ,

ಭಾನುವಾರ ಹೊತ್ತು ಹುಟ್ಟುವ ಸಮಯಕ್ಕೆ ಬೆತ್ತಲೆಯಲ್ಲಿ ಒಂದೇ ಸಲಕ್ಕೆ ಕಡಿದ ಗಿಡದ ಮೂರು ತುಂಡುಗಳನ್ನು ತರಬೇಕು. (ಹಾಲಗಲಾದ್ದು, ದೇವಗನದ್ದು, ದೂಪಗಲದ್ದು) ಅವುಗಳಲ್ಲಿ ಎರಡನ್ನು ಮತ್ತೆ ತಲಾ ಮೂರು ಮೂರು ತುಂಡುಗಳಾಗಿ ಮಾಡಿ, ಅವುಗಳನ್ನು ರೊಪ್ಪದ(ದನ–ಕುರಿಗಳನ್ನು ಒಂದೆಡೆ ಕೂಡಿಹಾಕುವ ಸ್ಥಳ) ಮಧ್ಯೆದಲ್ಲಿ ಊಳಬೇಕು. ಉಳಿದ ಒಂದು ತುಂಡಿನಲ್ಲಿ ನಾರು ತೆಗೆದು ಆ ನಾರಿನಿಂದ ಒಂಭತ್ತು ಉಂಗುರಗಳನ್ನು ಮಾಡಬೇಕು. ಹಾಗೆ ತಯಾರಿಸಿದ ಉಂಗುರಗಳನ್ನು ದನಕರುಗಳಿಗೆ ಕಟ್ಟಬೇಕು. ಹೀಗೆ ಮಾಡುವುದರಿಂದ ಕಾಲುಬಾಯಿ ರೋಗ ನಿವಾರಣೆಯಾಗುತ್ತದೆ ಎಂಬ ನಂಬಿಕೆ ಇದೆ.

ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನ ನಲಗೇತನಹಟ್ಟಿ ಗ್ರಾಮದಲ್ಲಿ ಜಾನುವಾರುಗಳಿಗೆ 'ಕಾಲು ಬಾಯಿ ಜ್ವರ' ಬಂದಿದೆ ಎಂದು ತಿಳಿದ ತಕ್ಷಣ ಈ ಮುಂದಿನಂತೆ ಕ್ರಮ ವಹಿಸುತ್ತಾರೆ. ಇಂಗು, ಏಲಕ್ಕಿ ಬಾಳೆ, ಮೆಣಸು, ಬೆಳ್ಳುಳ್ಳಿ ಇವುಗಳನ್ನು ನುಣ್ಣಗೆ ಹರಿದು, ಜಾನುವಾರುಗಳ ಬಾಯಿ ಮತ್ತು ಕಾಲಿಗೆ ಹಚ್ಚುತ್ತಾರೆ. ಹೀಗೆ ಮಾಡುವುದರಿಂದ ರೋಗ ನಮ್ಮ ಜಾನುವಾರುಗಳ ಬಳಿಯೆ ಸುಳಿಯುವುದಿಲ್ಲ ಎಂಬುದು ಪಶುಪಾಲಕರ ಪಾರಂಪರಿಕ ಜ್ಞಾನವಾಗಿದೆ. ಹಾಗೆಯೇ ಪೀಠೇಪ ಮರಕ್ಕೆ ಭಾನುವಾರ ಅಥವಾ ಶುಕ್ರವಾರ ಕಾಯಿ, ಊದಿನಕಡ್ಡಿ, ಒಂದು ಎಲೆ, ಒಂದು ಅಡಿಕೆ, ಒಂದು ಅಂಗದಾರ ಮತ್ತಿತರ ಸಾಮಗ್ರಿಗಳನ್ನು ಬಳಸಿ ಪೂಜೆ ಮಾಡಿ, ಅದರ ಚಕ್ಕೆಯನ್ನು ಕಿತ್ತು ತಂದು ಸಂಜೆ ಹೊತ್ತಲ್ಲಿ ಹಾಲಿನ ಜೊತೆ ಸೇರಿಸಿ ರಾಸುಗಳಿಗೆ ಮತ್ತು ದೊಡ್ಡಿಯ ಸುತ್ತಾ ಚೆಲ್ಲುತ್ತಾರೆ. ಹೀಗೆ ಮಾಡಿದರೆ ಕಾಲುಬಾಯಿ ಜ್ವರ ವಾಸಿಯಾಗುತ್ತದೆ ಎಂಬುದು ಪಶುಪಾಲಕರ ಅನುಭವಕ್ಕೆ ಬಂದ ಸತ್ಯಸಂಗತಿಯಾಗಿದೆ.

ಚಿತ್ರದುರ್ಗ ಜಿಲ್ಲೆಯ, ಚಳ್ಳಕೆರೆ ತಾಲೂಕಿನ ಮತ್ತೊಂದು ಹಳ್ಳಿಯಾದ ಪೆತ್ತಮರಹಟ್ಟಿ ಎಂಬ ಗ್ರಾಮದಲ್ಲಿ ಕಾಲುಬಾಯಿ ರೋಗ ಆಚರಣೆಯನ್ನು ವಿಭಿನ್ನವಾಗಿ ಆಚರಿಸುವುದು ಕಂಡುಬಂದಿದೆ. ದನಕರುಗಳಿಗೆ ಕಾಲುಬಾಯಿ ರೋಗ ಬಂದಾಗ ಊರಿನ ನಾಟಿವೈದ್ಯನೊಬ್ಬ ಬೆಳಗಿನಜಾವ ಸ್ನಾನ ಮಾಡಿ ಊರ ಹೊರವಲಯದಲ್ಲಿರುವ ಇಂಗಳಾರದ ಗಿಡಕ್ಕೆ ಉಟ್ಟುರೂಪದಲ್ಲಿ(ಬೆತ್ತಲಾಗಿ) ಅಂಗದಾರವನ್ನು ಕಟ್ಟಿ, ಪೂಜೆ ಮಾಡಿ ಗಿಡವನ್ನು ಕಿತ್ತುಕೊಂಡು ಜೊತೆಗೆ ಹಾಲಗಲದ್ದು, ದೇವಗಲದ್ದು ಮತ್ತು ದೂಪಗಲದ್ದು ಎಂಬ ಮೂರು ಬಗೆಯ ಗಿಡಗಳನ್ನು ಕಿತ್ತು ತಂದು, ಏಲಕ್ಕಿ ಬಾಳೆಹಣ್ಣು, ಇಂಗು ಪುಡಿಮಾಡಿ, ಸೆಜ್ಜೆಯನ್ನು ಪುಡಿಮಾಡಿ ಇವೆಲ್ಲವನ್ನು ಕಲೆಸಿ ಚೆನ್ನಾಗಿ ಕುದಿಸಿ(ಬೇಯಿಸಿ) ಜಾರುವಾರುಗಳು ವಾಸಿಸುವ ಸ್ಥಳದಲ್ಲಿ ಚೆಲ್ಲುತ್ತಾರೆ. ಅಲ್ಲದೆ ಮೂರುದಿನಗಳ ಕಾಲ ಮೀನಿನ ಚರ್ಮದ ಮೇಲಿನ ತೊಗಟೆ(ಉರುಕ)ಯನ್ನು ನೀರಿನಲ್ಲಿ ಬೆರೆಸಿ ಹಟ್ಟಿಯಲ್ಲಿ ಚೆಲ್ಲುತ್ತಾರೆ. ಹೀಗೆ ಮಾಡಿದರೆ ಕಾಲುಬಾಯಿ ರೋಗ ನಿವಾರಣೆಯಾಗುತ್ತದೆ ಎಂದು ಭಾವಿಸಿದ್ದಾರೆ. ಇಂಗಳಾರದ ಕಾಯಿ, ಬಿಲ್ವಪತ್ರೆ ಕಾಯಿಯನ್ನು ಬಿಡಿಸಿಕೊಂಡು ಪುಡಿಮಾಡಿ ಅದರ ಜೊತೆಗೆ ಏಲಕ್ಕಿ ಬಾಳೆಹಣ್ಣು, ಇಂಗು ಮತ್ತು ಮೀನಿನ ಉರುಕನ್ನು ಕಲೆಸಿ ಬಾಯಿ ಉಣ್ಣು ಆದ ಜಾಗಕ್ಕೆ ಲೇಪಿಸುತ್ತಾರೆ. ಹೀಗೆ ಮೂರು ದಿನಗಳ ಕಾಲ ಲೇಪಿಸಿದರೆ ಬಾಯಿ ಉಣ್ಣು ರೋಗ ನಿವಾರಣೆಯಾಗುತ್ತದೆ ಎಂಬುದು ಪಶುಪಾಲಕರ ನಂಬಿಕೆಯಾಗಿದೆ. ಸಾಮಾನ್ಯವಾಗಿ ಕಾಲುಬಾಯಿ ರೋಗ ಜನವರಿ ತಿಂಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಆದ ಕಾರಣ ದನ–ಕುರಿಗಳಿಗೆ ಮುಂದೆ ಒದಗಬಹುದಾದ ಆಪತ್ತನ್ನು ತಪ್ಪಿಸುವ ಉದ್ದೇಶದಿಂದ ಈ ಆಚರಣೆಯನ್ನು ಡಿಸೆಂಬರ್ ತಿಂಗಳಲ್ಲೇ ಮಾಡಿ ಮುಗಿಸುತ್ತಾರೆ. ಇದರಿಂದ ದನ–ಕುರಿಗಳು ಕ್ಷೇಮವಾಗಿರುತ್ತವೆ. ಹೀಗೆ ಜನಪದರು ಆಚರಿಸುವ ಪ್ರತಿಯೊಂದು ಆಚರಣೆಗಳು ಕಾಲ–ವಿಪತ್ತುಗಳನ್ನು ಗಮನದಲ್ಲಿಟ್ಟುಕೊಂಡು ನಿರಂತರವಾಗಿ ತಮ್ಮ ಊರಿನ ಮತ್ತು ದನ–ಕರು, ಕುರಿ–ಮೇಕೆಗಳ ರಕ್ಷಣೆಯಲ್ಲಿ ನಿರತರಾಗಿರುವುದು ಕಂಡುಬರುತ್ತದೆ.

ಜನಪದರಲ್ಲಿ ಹೆಚ್ಚಿನವರು ಪಶುಪಾಲಕರೇ ಹಾಗಾಗಿ ತಾವು ಸಾಕಿದ ದನ–ಕರು, ಕುರಿ–ಮೇಕೆಗಳಿಗೆ ರೋಗಗಳು ಬಂದಾಗ ಅವರಿಗೆ ಎರಡು ರೀತಿಯ ಆತಂಕಗಳು ಎದುರಾಗುತ್ತವೆ. ಅವೆಂದರೆ ಮೊದಲನೆಯದು ದೇವರು ಮುನಿಸಿಕೊಂಡಿದ್ದಾರೆ ಎಂದು, ಇನ್ನೊಂದು ಏಳಿಗೆಯನ್ನು ಸಹಿಸದ ಜನ ಮಾಟ ಮಾಡಿಸಿದ್ದಾರೆಂದು ನಂಬುತ್ತಾರೆ. ನಂಬಿಕೆ ಮತ್ತು ಸಂಪ್ರದಾಯಗಳಲ್ಲಿ ಹೆಚ್ಚು ನಂಬಿಕೆ ಇಟ್ಟಿರುವ ಜನಪದರು ಅವುಗಳ ಪರಿಹಾರಕ್ಕೆ ಅನೇಕ ರೀತಿಯ ಆಚರಣೆಗಳನ್ನು ಆಚರಿಸುತ್ತಾ ಬಂದಿರುವುದು ಕಂಡುಬರುತ್ತದೆ. ಕುರಿಗಳಿಗೆ ಅನಿರೀಕ್ಷಿತವಾಗಿ, ಅಪರೂಪಕ್ಕೆ ದೊಡ್ಡ ಕಾಯಿಲೆ ಬರುತ್ತದೆ. ಹೀಗೆ ರೋಗ ಬಂದರೆ ಕುರಿಗಳು ಹಿಂಡಿಗೆ ಹಿಂಡೆ ಸಾವನ್ನಪ್ಪುತ್ತವೆ. ಬೇಧಿ ಮಾಡಿಕೊಂಡ ತಕ್ಷಣ ನೆಲಕಚ್ಚಿ ಸಾಯುವುದು ಈ ರೋಗದ ಪ್ರಧಾನ ಲಕ್ಷಣ. ಇದಕ್ಕೆ ಮಣಿ ನೀರು ಹಾಕುವುದೊಂದೆ ಮದ್ದು. ಈ ರೋಗ ಒಂದು ರೀತಿಯ ಗಾಬು(ಅಮ್ಮನ ಪ್ರಭಾವ)ಎಂದು ಭಾವಿಸುವ ಪಶುಪಾಲಕರು, ತಮ್ಮ ಬಳಿ ಇರುವ ವಿಶಿಷ್ಟ ಮಣಿಗಳನ್ನು ಮೀಸಲು ನೀರಿನಲ್ಲಿ ತೊಳೆದು, ಆ ನೀರನ್ನು ಕುರಿಗಳಿಗೆ ಮತ್ತು ಕುರಿ ರೊಪ್ಪಕ್ಕೆ ಚೆಲ್ಲುತ್ತಾರೆ. ಹೀಗೆ ಮಾಡುವುದರಿಂದ ರೋಗ ವಾಸಿಯಾಗುತ್ತದೆ ಎಂಬ ನಂಬಿಕೆಯಿದೆ. ಮಣಿಗಳೆಂದರೆ, ಮಹಿಳೆಯರು ಸಾಮಾನ್ಯವಾಗಿ ಧರಿಸುವ ಮಣಿಗಳಿಗಿಂತ ಭಿನ್ನವಾದವು ಹಾಗೂ ವಿಶಿಷ್ಟವಾದವು. ಇವು ಮಾರುಕಟ್ಟೆಯಲ್ಲಿ ತಂದವುಗಳಲ್ಲ. ಬದಲಿಗೆ ಇವುಗಳಿಗೆ ಜೀವಕಳೆಯಿದ್ದು, ಹುಣ್ಣಿಮೆ, ಅಮವಾಸ್ಯೆ ದಿನಗಳಂದು ಪಕ್ಷಿಗಳಂತೆ ಹಾರುತ್ತವೆ ಎಂಬುದು ನಂಬಿಕೆ ಇದ್ದು, ಇವು ರಾತ್ರಿ ಹೊತ್ತು ಮೇವಿಗಾಗಿ ಬರುತ್ತವೆ. ಹಾರುವಾಗ ನಕ್ಷತ್ರದಂತೆ

ಬೆಳಕು ಬೀರುತ್ತವೆ. ಆಹಾರಕ್ಕೆ ಬಂದು ಗರಿಕೆ ಇದ್ದ ಜಾಗದಲ್ಲಿ ಇಳಿಯುತ್ತವೆ. ಅವು ಹಾಗೆ ಇಳಿದಾಗ ಅವುಗಳ ಮೇಲೆ ಸಗಣಿ ಚೆಲ್ಲಿ ಹಿಡಿಯಲಾಗುತ್ತದೆ. ಹಿಡಿದು ತಂದು ಸಿದ್ಧಿಮಾಡಿಕೊಂಡು ಮನೆಯಲ್ಲಿಟ್ಟಿರುತ್ತಾರೆ. ಮನೆಯಲ್ಲಿ ಸಂರಕ್ಷಿಸಿ ಇಡುವ ಕ್ರಮ ಕೂಡ ವಿಭಿನ್ನ. ಒಂದು ಚಿಕ್ಕ ಬಟ್ಟೆ ಚೀಲದಲ್ಲಿ ಭತ್ತವನ್ನು ಕೈಯಲ್ಲಿ ಉಜ್ಜಿ ಹಾಕುತ್ತಾರೆ. ಅದರೊಳಗೆ ಆ ಮಣಿಗಳನ್ನು ಕಟ್ಟಿ ಇಡುತ್ತಾರೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಚೀಲದೊಳಗೆ ಇರುವ ಭತ್ತವನ್ನು ಮಣಿಗಳು ತಿನ್ನುತ್ತವೆ(ಮಣಿಗಳು ಬತ್ತವನ್ನು ತಿಂದರೆ ಆ ಮಣಿಗಳು ಶ್ರೇಷ್ಠವೆಂದರ್ಥ. ಮಣಿಗಳು ಕಪ್ಪು, ಬಿಳಿ ಮತ್ತು ನೀಲಿ ಬಣ್ಣದಿಂದ ಕೂಡಿದ್ದು, ಅವುಗಳ ಮೇಲೆ ಚಿಕ್ಕ ಚಿಕ್ಕ ಮಚ್ಚೆಗಳು ಇರುತ್ತವೆ ಎಂದು ವಕ್ತೃಗಳು ಹೇಳುತ್ತಾರೆ) ಎಂಬುದು ಇವರ ನಂಬಿಕೆ. ಈ ನಂಬಿಕೆಗೆ ಪೂರಕವೆಂಬಂತೆ ಚೀಲದೊಳಗಿನ ಭತ್ತ ಪೂರ್ಣ ನುಸಿಯಾಗಿರುವುದು ಗಮನಾರ್ಹ. ವಕ್ತೃಗಳು ಹೇಳುವ ಪ್ರಕಾರ, ಇನ್ನು ಕೆಲವು ಕಡೆ ಪೂಜಾರಿಗಳು/ಮಂತ್ರವಾದಿಗಳು ಮಂತ್ರಿಸಿಕೊಟ್ಟ ಐದು ಕಲ್ಲುಗಳನ್ನು ತೆಗೆದುಕೊಂಡು ಹೋಗಿ ರೋಗ ಬಂದ ದನ–ಕುರಿಗಳು ವಾಸಿಸುವ ಪ್ರದೇಶದಲ್ಲಿ ಎಸೆದರೆ ಖಾಯಿಲೆ ವಾಸವಾಯಿತು ಎಂದು ಪೆತ್ತಮ್ಮರಟ್ಟಿ, ಚಳ್ಳಕೆರೆ ತಾಲೂಕು, ಚಿತ್ರದುರ್ಗ ಜಿಲ್ಲೆಯ ಯರ್ರಪ್ಪ (ವಯಸ್ಸು 48ವರ್ಷ)ಎಂಬ ವಕ್ತೃವೊಬ್ಬರು ತಮ್ಮ ಅನುಭವದಿಂದ ಕಂಡುಕೊಂಡ ಸತ್ಯವನ್ನು ಹಂಚಿಕೊಳ್ಳುತ್ತಾರೆ. ಈ ಮಣಿಗಳನ್ನು ಯುಗಾದಿ ಅಮವಾಸ್ಯೆಯ ದಿನ ಜೇನು ತುಪ್ಪದಲ್ಲಿ ಮತ್ತು ಹಾಲಿನಲ್ಲಿ ತೊಳೆದು ಶುದ್ಧೀಕರಿಸುತ್ತಾರೆ.

ಕೆಲವೊಮ್ಮೆ ಕುರಿ ಮತ್ತು ದನಗಳಿಗೆ ಎದೆ ಮತ್ತು ಕೆಚ್ಚಲು ಬಾವು ಬರುತ್ತದೆ. ಇದು ತುಂಬಾ ಅಪರೂಪಕ್ಕೆ ಕಾಣಿಸಿಕೊಳ್ಳುವ ಸಮಸ್ಯೆ. ಬೇರೆ ಯಾವುದೇ ರೀತಿಯ ರೋಗದಲ್ಲೂ ಈ ಲಕ್ಷಣ ಕಾಣಿಸುವುದಿಲ್ಲ. ಹಾಗಾಗಿ ಇದು ಸಾಮಾನ್ಯವಾಗಿ ಬಂದಿರುವ ರೋಗವಾಗಿರದೆ ಯಾರೋ ಅಸೂಯೆಪರರು ಮಾಡಿಸಿದ ಕೆಡಕಿನಿಂದ ಬಂದಿರುವ ರೋಗವೆಂಬುದು ಪಶುಪಾಲಕರ ಅಭಿಪ್ರಾಯವಾಗಿರುತ್ತದೆ. ಒಬ್ಬ ಪಶುಪಾಲಕ ಹೆಚ್ಚಿನ ಹಿಂಡು ಬೆಳೆಸಿದರೆ ಅದನ್ನು ಸಹಿಸದ ಜನ ಆ ಕುರಿ ಹಿಂಡಿಗೆ ಮಾಟ ಮಾಡಿಸುತ್ತಾರೆ ಎಂಬುದು ಕುರಿಗಾಹಿಗಳ ತಿಳುವಳಿಕೆ. ಹೀಗೆ ಮಾಟದ ಪ್ರಭಾವಕ್ಕೆ ಸಿಕ್ಕು ನರಳುತ್ತಿರುವ ರೋಗಕ್ಕೆ ಪಾರಂಪರಿಕವಾಗಿ ಮಾಡಿಕೊಂಡು ಬಂದಿರುವ ಚಿಕಿತ್ಸಾ ಕ್ರಮವೆಂದರೆ; ಮೂರು ಬಾವಿ ನೀರು, ಮೂರು ನಿಂಬೆಕಾಯಿ, ಮೂರು ದಿನಿಸಿನ ರಂಗೋಲಿ ಹಿಟ್ಟು, ಮೂರು ದಿನಸಿನ ಕುಂಕುಮ, ಮೂರು ದಿನಸಿನ ಹೂವು, ಒಂದು ಕಾಯಿ, ಊದಿನ ಕಡ್ಡಿ, ಎಲೆ–ಅಡಿಕೆ ತೆಗೆದುಕೊಂಡು ಹುತ್ತವಿರುವ ಪೂರ್ವದಿಕ್ಕಿಗೆ ಹರಿದಿರುವ ಕಾಲುವೆ ಇರುವ ಜಾಗದಲ್ಲಿ ನೀರು ಹಾಕಬೇಕು. ಇದರ ಜೊತೆಗೆ ದನಗಳಿಗೆ ಗಮಗಾಂಧಾರಿ ಮತ್ತು ವಿಷಗಾಂಧಾರಿ ಚೆಕ್ಕೆಯನ್ನು ನೀರಲ್ಲಿ ನೆನೆಸಿ, ಚನ್ನಾಗಿ ಕುದಿಸಿ ರಾಸುಗಳ ಬೆನ್ನ ಮೇಲೆ ಹಾಕಿದರೆ ಮಾಟದ ಪ್ರಭಾವ ಕಡಿಮೆಯಾಗುತ್ತದೆ. ಮಾದಿಗರು ಚರ್ಮ ಹದಮಾಡಲು ಬಳಸುವ ಗಲ್ಲಬಾನೆಯ ನೀರನ್ನು ದನ–ಕುರಿಗಳ ಹಟ್ಟಿ–ರೊಪ್ಪದ ಸುತ್ತ ಚೆಲ್ಲುವುದರಿಂದ ಮಾಟದ ಪ್ರಭಾವವನ್ನು ನಿಯಂತ್ರಣದಲ್ಲಿಡಬಹುದು ಎಂಬ ನಂಬಿಕೆ ಜನಪದರಲ್ಲಿದೆ.

ಸಾಮಾನ್ಯವಾಗಿ ಕುರಿಗಾಹಿಗಳು ತಮ್ಮ ಕುರಿಗಳ ಕೂದಲನ್ನು ವರ್ಷಕ್ಕೆ ಎರಡು ಬಾರಿ ಕತ್ತರಿಸುವ ಕ್ರಮವಿದೆ. ಹೀಗೆ ಕತ್ತರಿಸುವುದರಿಂದ ರೋಗ–ರುಜಿನಗಳು ಬರುಬಹುದು ಎಂಬು ನಂಬಿಕೆ ಇದೆ. ಹಾಗಾಗಿ ಕುರಿ ಕೂದಲನ್ನು ಕತ್ತರಿಸುವವರಿಗೆ ಕುರಿ ಮಾಲೀಕ ಒಂದು ಕುರಿಯನ್ನು ಕೊಡುತ್ತಾನೆ. ಕೂದಲು ಕತ್ತರಿಸುವವರು ದಾನವಾಗಿ ಪಡೆದ ಕುರಿಯನ್ನು ರಾತ್ರಿ ಬಲಿ ನೀಡುತ್ತಾರೆ. ಬಲಿಯ ನಂತರ ಕರಸು ಮತ್ತು ಅದರ ರಕ್ತವನ್ನು ಬೇವಿನ ಸೊಪ್ಪು ಹಾಗೂ ಕಕ್ಕೆ ಗಿಡದ ಎಲೆಯನ್ನು ಬೆರೆಸಿ ಹೋಲಿಗ್ಯ ಹೋಲಿಗ್ಯ ಎಂದು ಚರಗ ಚೆಲ್ಲುತ್ತಾರೆ. ಮರುದಿನ ಬೆಳಿಗ್ಗೆ ಮದುವೆಯಾಗದ ಕೋರುಡುಗೆ(ಹೆಣ್ಣುಮಗಳು)ಯನ್ನು ಕರೆತಂದು ಕುರಿ ಬೀಡು ಬಿಟ್ಟ ಹಟ್ಟಿಯಲ್ಲಿ ಒಂದು ಕಂಬಳಿಯನ್ನು ಹಾಸಿ, ಅದರ ಮೇಲೆ ಹಿತ್ತಾಳೆ ಪಿತಾಂಬರಿಯನ್ನು ಇಟ್ಟು ಅದರೊಳಗೆ ಕುರಿ ಕೂದಲನ್ನು ಕತ್ತರಿಸುವ ಕತ್ತರಿ, ಕೊಡಲಿ, ಒಂದು ಕೋಲು, ಬೇವಿನಸೊಪ್ಪು, ಕಕ್ಕೆ ಗಿಡದ ಎಲೆ ಹಾಗೂ ಕುರಿ ಹಿಕ್ಕೆಯನ್ನು ಮೂರು ಗುಂಪುಗಳಾಗಿ ಇಟ್ಟು, ಒಂದು ಚೆಂಬಿನಲ್ಲಿ ಕುರಿ ಹಾಲನ್ನು ಕರೆದು ಪೂಜೆ ಸಲ್ಲಿಸುತ್ತಾರೆ. ಹೀಗೆ ಮಾಡಿದ ನಂತರ ಪಿತಾಂಬರದಲ್ಲಿರುವ ಕುರಿ ಹಿಕ್ಕೆಯ ಮೇಲೆ ಕರೆದ ಕುರಿ ಹಾಲು ಮತ್ತು ತುಪ್ಪವನ್ನು ಬೆರೆಸಿ, ಹಟ್ಟಿಯ ಸುತ್ತಲು 'ಹೋಲಿಗ್ಯ ಹೋಲಿಗ್ಯ' ಎಂದು ಚಲ್ಲುತ್ತಾರೆ. ಇದು ಮೂರು ದಿನಗಳ ಕಾಲ ನಡೆಯುವ ಆಚರಣೆಯಾಗಿದೆ(ಮೊದಲನೆಯ ದಿನ ಕುರಿಗೆ ಸ್ನಾನ ಮಾಡಿಸುವುದು, ಎರಡನೆಯ ದಿನ ಕುರಿ ಕುದಲನ್ನು ಕತ್ತರಿಸುವುದು, ಮೂರನೆಯ ದಿನ ಹಾಲು–ತುಪ್ಪ ಚೆಲ್ಲುವ ಕಾರ್ಯ). ಹೀಗೆ ಮೂರು ದಿನಗಳ ಕಾಲ ನಡೆಯುವ ಈ ಆಚರಣೆಯ ಸಂದರ್ಭದಲ್ಲಿ ಮನೆಯಲ್ಲಿ ಹೆಂಚನ್ನು ಇಟ್ಟು ರೊಟ್ಟಿ, ಚಪಾತಿ, ಇನ್ನಿತರೆ ಪದಾರ್ಥಗಳನ್ನು ತಯಾರಿಸುವುದು ನಿಷಿದ್ಧ. ಹಾಗೇನಾದರು ಮಾಡಿದ್ದೇ ಆದಲ್ಲಿ ಕುರಿಗಳಿಗೆ ದೊಡ್ಡ ಗಂಡಾಂತರ ಒದಗುತ್ತದೆ ಎಂಬ ನಂಬಿಕೆ ಬಲವಾಗಿ ಬೇರೂರಿದೆ. ಹಾಗಾಗಿ ಇಂತಹ ಆಚರಣೆಗಳನ್ನು ಅತ್ಯಂತ ನಿಷ್ಠೆ, ಭಯ–ಭಕ್ತಿಯಿಂದ ಆಚರಿಸುತ್ತಾರೆ. ಕ್ಷೇತ್ರಕಾರ್ಯ ಸಂದರ್ಭದಲ್ಲಿ ಸ್ಥಳೀಯ ವಕ್ತೃಗಳಿಂದ ಈ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಒಟ್ಟಾರೆಯಾಗಿ ಪಶುಪಾಲಕರು ತಮ್ಮ ಜನ ಜಾನುವಾರುಗಳಿಗೆ ರೋಗರುಜಿನಗಳು ಬಂದಂತಹ ಸಂದರ್ಭದಲ್ಲಿ ನೀರುಹಾಕುವ, ಹಾಲು ತುಪ್ಪ ಚೆಲ್ಲುವ ಮತ್ತು ಗಿಡ ಚೆಲ್ಲುವಂತಹ ಪಾರಂಪರಿಕ ಆಚರಣೆಗಳ ಮುಖೇನ ದುಷ್ಟ ಶಕ್ತಿಗಳಿಂದ ತಮ್ಮ ಪಶು ಸಂಪತ್ತನ್ನು ರಕ್ಷಿಸಿ ಕೊಳ್ಳುತ್ತಾರೆ. ಆ ಮೂಲಕ ಪಶುಪಾಲನೆಯ ಸಂವೃದ್ಧಿ ಹಾಗೂ ತಾವೂ ಆರೋಗ್ಯ ಪೂರ್ಣವಾಗಿರುವುದರ ಜೊತೆಗೆ ಆರ್ಥಿಕವಾಗಿಯೂ ಸಬಲರಾಗುವ ಉದ್ದೇಶ ಈ ಆಚರಣೆಗಳ ಹಿಂದಿರುವ ಆಶಯವಾಗಿದೆ.

ಪರಾಮರ್ಶನ ಗ್ರಂಥಗಳು:


1. ಅಂಬಳಿಕೆ ಹಿರಿಯಣ್ಣ; ಜಾನಪದ ಪ್ರಕ್ರಿಯೆ – ಹಾಂಕೊ ದೃಷ್ಟಿ 2000, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
2. ಅರ್ತಸಾಲಿ ವೃಷಬೇಂದ್ರಾಚಾರ್, ಮಳೆರಾಜ ಪರಂಪರೆ, ಮಂಟಪಮಾಲೆ –214, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
3. ಅಬ್ದುಲ್ ರೆಹಮಾನ್ ಪಾಷ ಎಂ.; ನಂಬಿಕೆ, ಮೂಢನಂಬಿಕೆ, ವೈಜ್ಞಾನಿಕ ಮನೋವೃತ್ತಿ 2016, ನವಕರ್ನಾಟಕ ಪ್ರಕಾಶನ, ಬೆಂಗಳೂರು
4. ಗಂಗಾಧರ ದೈವಜ್ಞ; ಕೊರಗರು– ಸಮಕಾಲೀನ ಸ್ಪಂದನ (ಸಂ) 2012, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
5. ಗಂಗಾಧರ ದೈವಜ್ಞ, ಬುಡಕಟ್ಟು ಸಮಾಜ, ಹುಟ್ಟು ಸಾವಿನ ನಡುವೆ 2015, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
6. ಚಂದ್ರಶೇಖರ ದಾಮ್ಲೆ; ಜಾತ್ರೆ ಮತ್ತು ಸಂಶೋಧನಾತ್ಮಕ ಪ್ರಬಂಧಗಳು, 1990, ಸಮಾಜಶಾಸ್ತ್ರ ಸಂಘ, ದಕ್ಷಿಣಕನ್ನಡ, ಕರ್ನಾಟಕ.
7. ಚಕ್ಕರೆ ಶಿವಶಂಕರ್ (ಸಂಪಾದಕರು), ಜನಪದ ತಂತ್ರಜ್ಞಾನ–2003, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.
8. ಚನ್ನೇಶ್.ಟಿ.ಎಸ್, ಜನಪದ ಆಚರಣೆಗಳು ಮತ್ತು ಕೃಷಿ ತಂತ್ರಜ್ಞಾನ–2004, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
9. ಪುರುಷೋತ್ತಮ ಬಿಳಿಮಲೆ ಕೂಡುಕಟ್ಟು, ಜನಪದ ಅಧ್ಯಯನ ಲೇಖನಗಳು–1997, ಆನಂದಕಂದ ಗ್ರಂಥಮಾಲೆ, ಮಲ್ಲಾಡಿಹಳ್ಳಿ.
10. ಬೋರಲಿಂಗಯ್ಯ ಹಿ.ಚಿ, ದೇಸಿ ಸಂಸ್ಕೃತಿ ಸಂಕಲನ, 2008, ಸಪ್ನ ಬುಕ್‌ಹೌಸ್, ಬೆಂಗಳೂರು